# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ</u>

<u>ಸಿ. ಸಿ. ನಂ.*237/2023*</u>

**ಫಿರ್ಯಾದಿ** : ಸರ್ಕಾರದ ಪರವಾಗಿ ಚಿಂಚೋಳಿ ಪೋಲೀಸರು.

- ವಿರುದ್ದ -

**ಆರೋಪಿತರು** :

1. ಮಲ್ಲಯ್ಯಾ ತಂದೆ ಲಕ್ಷ್ಮಯ್ಯ ಇಳಗೇರ, 52 ವರ್ಷ, ಉಃ ದಾಭಾದ ಕೆಲಸ, ವಾಸಃ ಬೆನಕನಳ್ಳಿ, ತಾಃ ಚಿಂಚೋಳಿ.
2. ಅರವಿಂದ ತಂದೆ ಮರೆಪ್ಪ ಮೇತ್ರಿ, 33 ವರ್ಷ, ಉಃ ಕೂಲಿ ಕೆಲಸ, ವಾಸಃ ತುಮಕುಂಟಾ, ತಾಃ ಚಿಂಚೋಳಿ.

## ***ಃಃದೋ ಷಾ ರೋ ಪ ಣೆಃಃ***

ನಾನು ***ಶ್ರೀ ರವಿಕುಮಾರ ವಿ. ಬಿ.ಎಲ್.ಎಲ್ಎಲ್.ಬಿ.*** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ,

- - -

ದಿನಾಂಕಃ 17-03-2023 ರಂದು 03-30 ಪಿ.ಎಮ್ ಗಂಟೆಯ ಸುಮಾರಿಗೆ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ತುಮಕುಂಟಾ ಹತ್ತಿರ ದಾಭಾದ ಹತ್ತಿರ ಇರುವ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರಾದ ನೀವು ಯಾವುದೇ ಅಧಿಕೃತ ಪರವಾನಿಗೆ ಪಡೆಯದೇ ಅನಧಿಕೃತವಾಗಿ 650 ಎಮ್.ಎಲ್ ನ 30 ಕಿಂಗ್ ಫೀಷರ್ ಫೂಲ್ ಬಾಟಲಿಗಳು, 90 ಎಮ್.ಎಲ್ ನ 23 ವಿಸ್ಕಿ ಪೌಚಗಳು ಮತ್ತು 180 ಎಮ್.ಎಲ್ ನ 9 ಓಟಿ ಪೌಚಗಳ ಮದ್ಯವನ್ನು ಮಾರಾಟ ಮಾಡುತ್ತಿದ್ದ ಕಾರಣ, ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಮದ್ಯಪಾನವನ್ನು ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪರವಾನಗಿ/ಅನುಮತಿಯನ್ನು

ಪಡೆಯದೆ ನಿಗದಿತ ಪ್ರಮಾಣವನ್ನು ಮೀರಿದ ಮದ್ಯವನ್ನು ಸೂಕ್ತ ಪರವಾನಗಿ ಇಲ್ಲದೆ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡುವ ಕಾರಣ, ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ದಿನಾಂಕಃ 16-01-2024.

*(ಶ್ರೀ ರವಿಕುಮಾರ ವಿ.)*
*ಪ್ರಧಾನ ಪ್ರ.ದ.ನ್ಯಾ.ದಂಡಾಧಿಕಾರಿ,*
ಚಿಂಚೋಳಿ.